Government in the matter, Government direct..... ....."
That does not mean immediately.

ಶ್ರೀ ಬಿ. ಹುಚ್ಚೇಗೌಡರು.—ಪಬ್ಲಿಕ್ ಸರ್ವಿಸ್ ಕಮಿಷನ್ ತಕ್ಷಣ ನೇಮಕ ಮಾಡಬೇಕೆಂಬ ಭಾವನೆ ಅದರಲ್ಲಿಲ್ಲವೆ ?

ಶ್ರೀ ಎಚ್. ಸಿದ್ದಯ್ಯನವರು.—ಅದೇ ಭಾವನೆ.

ಶ್ರೀ ಬಿ. ಹುಚ್ಚೇಗೌಡರು.—ಅನಿರ್ದಿಷ್ಟ ಕಾಲದವರೆಗೆ ಆ ಕಮಿಷನ್ ನೇಮಕ ಮಾಡುವುದು ಮುಂದುವರಿಯಬೇಕೆಂಬ ಅಭಿಪ್ರಾಯವಿದೆಯೆ ?

ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆರ್ಡರನ್ನು ಹೊರಡಿಸಿ ಏಳು ತಿಂಗಳಾದರೂ ಅದು ನಿಧಾನವಾಗಿರುವುದಕ್ಕೆ ಕಾರಣವಿದೆಯೇ ?

ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಕಾರಣವಿದೆಯೆಂದು ಮೊದಲೇ ತಿಳಿಸಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ). ಈಗಿರುವ ಪಬ್ಲಿಕ್ ಸರ್ವಿಸ್ ಕಮಿಷನರ ಸಂಬಳ ಪೆಷ್ಟು?

Mr. SPEAKER.—It does not arise.

Amritmahal Cattle in the State and the area of kaval reserved for them.

*Q—17. Sri B. N. BORANNA GOWDA (Hassan District—General).—

Will the Government be pleased to lstate.—

(a) the number of Amritmahal cattle in the State ;

(b) the number in the Government farms ;

(c) the number with the servegars;

(d) the income that they get from the cattle in the Government farms and with servegars;

(e) the expenditure incurred thereon ;

(f) the area of kaval reserved for grazing these cattle ?

A.—Sri T. MARIAPPA (Home Minister).—

(a) 3,975.
(b) 1,824.
(c) 891.
(d) Rs. 73,775,
(e) Rs. 57,118.
(f) 44,335 acress.

ಶ್ರೀ ಬಿ. ಎಚ್. ಬೋರಣ್ಣಗೌಡರು.—(a) ಪ್ರಶ್ನೆಗೆ ಉತ್ತರವಾಗಿ ಅಮೃತಮಹಲ್ ದನಗಳ ಸಂಖ್ಯೆ 3,975 ಎಂದು ಹೇಳಿದೆ. ಅದರಲ್ಲಿ ಸರ್ಕಾರಿ ಮತ್ತು ಖಾಸಗಿ ಎರಡೂ ಸೇರಿದೆಯಲ್ಲವೆ ?

ಶ್ರೀ ಟಿ. ಮರಿಯಪ್ಪನವರು.—ಹೌದು ಒಟ್ಟು ದನಗಳ ಸಂಖ್ಯೆ ಅದು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಈ ಏಜೆನ್ಸಿ ಅಲ್ಲದೆ ಅಮೃತಮಹಲ್ ದನಗಳು ಇನ್ನೆಲ್ಲವೆ ?

ಶ್ರೀ ಟಿ. ಮರಿಯಪ್ಪನವರು —ಇನ್ನೆಲ್ಲೂ ಇಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಈ ದನಗಳನ್ನು ಮೇಯಿಸುವುದಕ್ಕೆ 44,335 ಎಕರೆಗಳನ್ನು ಬಿಟ್ಟಿರುವುದರ ಪ್ರಕಾರ ಒಂದು ದನಕ್ಕೆ ಏಳು ಚಿಲ್ಲರೆ ಎಕರೆ ಇದೆ. ಆದರಲ್ಲದೆ ಎಲ್ಲಾ ಕಾವಲುಗಳಲ್ಲೂ ಮೇಯಿಸುವುದಕ್ಕೆ ಅವಕಾಶವಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಸರ್ಕಾರಿ ದನಗಳನ್ನು ಮೇಯಿಸುವುದಕ್ಕೆ ಎಷ್ಟು ಬೇಕೋ ಅಷ್ಟರಲ್ಲಿ ಮಾತ್ರ ಅವಕಾಶ ಕೊಟ್ಟಿದೆ.

ಶ್ರೀ ಬಿ. ಎಚ್ ಬೋರಣ್ಣಗೌಡರು.—ದನಗಳು ಕಡಿಮೆಯಾದ್ದರಿಂದ ಬೇರೆ ರೀತಿಯಿಂದ ಹಣ ಸಂಪಾದನೆ ಮಾಡುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಸರ್ಕಾರದ ಗಮನಕ್ಕೆ ಬಂದಿಲ್ಲ, ಹಾಗೇನಾದರೂ ಇರುವುದನ್ನು ಗಮನಕ್ಕೆ ತಂದರೆ ಕೂಡಲೇ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ದನಗಳನ್ನು ಮೇಯಿಸದೇ ಇರುವ ಕಡೆ ಇರುವ ಜಾಗವನ್ನು ಸಾಗುವಳಿಗೆ ಕೊಡಬೇಕೆಂದು ಮನವಿ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಬಂದಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಆ ವಿಚಾರದಲ್ಲಿ ಏನು ಕಾರ್ಯಕ್ರಮ ಕೈಗೊಂಡಿದೆ ?

ಶ್ರೀ ಟಿ. ಮರಿಯಪ್ಪನವರು.—ಕೆಲವು ಕಡೆ ಎಲ್ಲಾ ವಿಷಯಗಳನ್ನು ಪರಿಶೀಲಿಸಿ ಕೆಲವು ಭಾಗವನ್ನು ರೆವೆನ್ಯೂ ಇಲಾಖೆಗೆ ಒಪ್ಪಿಸಿದೆ. ಅವರು ವ್ಯವಸಾಯಕ್ಕೆ ಕೊಡುತ್ತಿದ್ದಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಆ ರೀತಿ ಕೊಡುವ ಕಾಲದಲ್ಲಿ ಫಾರಂನವರು ಮತ್ತು ಸೇರ್ವೆಗಾರರು ಕೊಡಕೂಡದೆಂದು ಬರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಒಂದೆರಡು ಕಡೆ ಹಾಗಾಗಿದೆ. ಆದರೆ ಅಲ್ಲಿ ಸನ್ನಿವೇಶಗಳನ್ನೂ ಗಮನಿಸಿ ಬಾಧಕ ವಿಲ್ಲದೇ ಇರುವ ಕಡೆ ಹಾಗೆ ಕೊಟ್ಟಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—16,557 ರೂಪಾಯಿಗಳು, ಆದಾಯ ಎಂದು ಹೇಳಿದೆ. ಅದು ಸರಿಯಾದ ಆದಾಯವೆ ?

ಶ್ರೀ ಟಿ. ಮರಿಯಪ್ಪನವರು.—ಆದಾಯ 73755 ರೂಪಾಯಿಗಳು ಎಂದು ಉತ್ತರದಲ್ಲಿ ತಿಳಿಸಿದೆ.

ಶ್ರೀ ಬಿ. ಎಚ್ ಬೋರಣ್ಣಗೌಡರು.—ಖರ್ಚು ಕಳೆದು ನಿವ್ವಳ ಆದಾಯವನ್ನು ನಾನು ಹೇಳಿದೆ. ಅದು ಸರಿಯೆ ?

ಶ್ರೀ ಟಿ. ಮರಿಯಪ್ಪನವರು.—ಸರಿಯೆಂದು ಭಾವಿಸುತ್ತೇನೆ. ಹೆಚ್ಚು ಮಾಡಬೇಕೆಂಬುದು ತಮ್ಮ ಉದ್ದೇಶವೆ ?

ಶ್ರೀ ಎಂ. ಎಚ್. ಜೋಯಿಸರು (ಮೈಸೂರು ಜಿಲ್ಲೆ)—ಹಾಗಾದರೆ ಆ ರೀತಿ ಮಾಡುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗಜಿಲ್ಲೆ)—ಇದಲ್ಲದೆ ಖಾಸಗಿಯಾಗಿ ಸಾಕುತ್ತಿರುವ ಸಂಖ್ಯೆ ಎಷ್ಟು ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎ. ಭೀಮಪ್ಪನಾಯಕರು.—ಏಡೆಡ್ ಕ್ಯಾಟಲ್ ಬ್ರೀಡರ್ಸ್ ಎಷ್ಟು ಮಂದಿ ಇದ್ದಾರೆ ?

ಶ್ರೀ ಟಿ. ಮರಿಯಪ್ಪನವರು.—ಆರು ಮಂದಿ ಏಡೆಡ್ ಕ್ಯಾಟಲ್ ಬ್ರೀಡರ್ಸ್ ಇದ್ದಾರೆ.

ಶ್ರೀ ಎ. ಭೀಮಪ್ಪನಾಯಕರು.—ದನಗಳನ್ನು ಮೇಯಿಸುವುದಕ್ಕೆ ಲೀಸ್‌ಗೆ ಅವರಿಗೆ ಎಷ್ಟು ಎಕರೆ ಕೊಟ್ಟಿದ್ದೀರಿ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎ. ಭೀಮಪ್ಪನಾಯಕರು.—ತಮ್ಮ ಲೆಕ್ಕದ ಪ್ರಕಾರ 1,824 ದನಗಳಿಗೆ 44,335 ಎಕರೆಯಿದೆ. ಅದರ ಪ್ರಕಾರ ಒಂದು ದನಕ್ಕೆ ಸರಾಸರಿ ಎಷ್ಟು ಬಿದ್ದ ಹಾಗಾಯಿತು. ಒಂದು ದನಕ್ಕೆ ಇಷ್ಟು ಎಕರೆಗಳನ್ನಿಟ್ಟುಕೊಳ್ಳಬೇಕೆಂಬುದು ನಿಗಡಿಯಾಗಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಕೊಟ್ಟಿರುವ ಸಂಖ್ಯೆಯನ್ನು ಹಂಚಿದರೆ ತಮಗೇ ಗೊತ್ತಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಹಳ್ಳಿಗಳಲ್ಲಿ ಹುಲ್ಲು ಬನ್ನಿ ಬಿಡುವಂತೆ ಅಮೃತಮಹಲ್ ದನಗಳಿಗೆ 100 ರಾಸಿಗೆ ಎಷ್ಟು ಜಮೀನನ್ನು ಮೇಯುವುದಕ್ಕಾಗಿ ಬಿಡುತ್ತೀರಿ?

ಶ್ರೀ ಟಿ. ಮರಿಯಪ್ಪನವರು.—ಗೋಮಾಳಕ್ಕೆ 100 ರಾಸಿದ್ದರೆ 30 ಎಕರೆ ಬಿಡುತ್ತಾರೆ. ಅಮೃತಮಹಲ್ ದನಗಳಿಗೆ ಒಳ್ಳೆಯ ಹುಲ್ಲು ಗಾವಲನ್ನು ಬಿಡುವುದರಿಂದ ಸಾಧಾರಣವಾಗಿ ಹತ್ತು ಎಕರೆ ಬೇಕು.

ಶ್ರೀ ಎ. ಭೀಮಪ್ಪನಾಯಕರು.—ಹಾಗಾದರೆ 1,800 ದನಗಳಿಗೆ 18 ಸಾವಿರ ಎಕರೆ ಸಾಲದೆ?

ಶ್ರೀ ಟಿ. ಮರಿಯಪ್ಪನವರು.—ಅದು ತಮಗೇ ಗೊತ್ತಾಗುತ್ತದೆ. ಮೇಯಲು ದನಗಳು ಕಾವಲಿನಿಂದ ಕಾವಲಿಗೆ ಹೋಗಬೇಕು. ಕೆಲವು ಕಡೆ ನರಿಯಾಗಿ ಹುಲ್ಲಿರುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಅದೇ ಲೆಕ್ಕದ ಮೇಲೆ ಪ್ರೈವೇಟ್ ಬ್ರೀಡರ್ಸ್‌ಗೂ ಹುಲ್ಲು ಗಾವಲನ್ನು ಕೊಟ್ಟಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಮೈನೂರು ದೇಶದಲ್ಲಿ ಈಗ್ಗೆ 20 ವರ್ಷಗಳ ಹಿಂದೆ ಇದ್ದಷ್ಟು ಅಮೃತಮಹಲ್ ದನಗಳು ಈಗಿಲ್ಲ, ಅದರ 1/15 ರಷ್ಟು ಕೂಡ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಕೊಟ್ಟರೆ ಅಂಕಿ ಅಂಶ ತಿಳಿಸಬಹುದು. ಅಂತೂ 20 ವರ್ಷದ ಹಿಂದೆ ಇದ್ದ ಹಾಗಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಹಾಗಾದರೆ ಜಾನವಾರು ಸಂಖ್ಯೆ ಕಡಿಮೆ ಆಗುತ್ತಿದೆಯೆಂದು ತಿಳಿದುಕೊಳ್ಳಬಹುದೆ?

ಶ್ರೀ ಟಿ. ಮರಿಯಪ್ಪನವರು.—ಕಡಿಮೆ ಆಗುತ್ತಿದೆಯೆಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಪ್ರೈವೇಟ್ ಬ್ರೀಡರ್ಸ್ ಬಳಿ ವರ್ಷೇ ವರ್ಷೆ ಹೆಚ್ಚುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಕೆಲವು ಕಡೆ ಹೆಚ್ಚು; ಕೆಲವು ಕಡೆ ಕಡಿಮೆ.

ಶ್ರೀ ಎ. ಭೀಮಪ್ಪನಾಯಕರು.—ತಮ್ಮಲ್ಲಿ ವರ್ಷೇ ವರ್ಷೆ ಕಡಮೆಯಾಗುತ್ತಿದೆಯಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ; ಪ್ರತಿ ವರ್ಷ ಏಂಗಡಿಸಿ ಮಾರುತ್ತೇವೆ. ವಯಸ್ಸಾಗಿರುವ ರಾಸುಗಳನ್ನು ಇಟ್ಟುಕೊಳ್ಳುವುದಿಲ್ಲ. ಅದರಿಂದ ಸ್ವಲ್ಪ ಕಡಿಮೆಯಾಗಿರುವ ಹಾಗೆ ಕಾಣಬಹುದು.

ಶ್ರೀ ಎ. ಭೀಮಪ್ಪನಾಯಕರು.—ಪ್ರೈವೇಟ್ ಬ್ರೀಡರ್ಸ್‌ಗೆ ಉತ್ತೇಜನ ಕೊಟ್ಟು ತಮ್ಮಲ್ಲಿರುವುದನ್ನು ಅವರಿಗೆ ಕೊಡುವುದು ಒಳ್ಳೆಯದಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಖಾಸಗಿಯವರಿಗೆ ಉತ್ತೇಜನ ಕೊಡಬೇಕೆಂದು ಸರ್ಕಾರಕ್ಕೂ ಉದ್ದೇಶವಿದೆ. ಅದನ್ನು ಪರಿಶೀಲಿಸಿ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಈಗಾಗಲೇ ಅದಕ್ಕೆ ಉತ್ತೇಜನ ನೀಡಲಾಗಿದೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ)—ಸಾಮಾನ್ಯವಾಗಿ ಅಮೃತಮಹಲ್ ಕಾವಲಿಗೆ ಬಿಟ್ಟಿರುವ ಭೂಮಿ ಬಹಳ ಉತ್ಕೃಷ್ಟವಾದದ್ದಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಕೆಲವು ಉತ್ಕೃಷ್ಟವಾಗಿವೆ; ಮತ್ತೆ ಕೆಲವು ಗುಡ್ಡ ಪ್ರದೇಶಗಳಾಗಿವೆ.

ಅಧ್ಯಕ್ಷರು.—ಜಮೀನಿನ ವಿಷಯ ಈ ಪ್ರಶ್ನೆ ಬಂದಿರುವಾಗ ಕೇಳಬಾರದು. The Hon'ble Member may ask for information about cattle.

Sri H. SIDDAVEERAPPA.—I am putting only relevant questions, ಅಮೃತಮಹಲ್ ಕಾವಲು ಜಮೀನನ್ನು ರೆವೆನ್ಯೂ ಇಲಾಖೆಗೆ ವಹಿಸುವುದರಲ್ಲಿ ಸರ್ಕಾರದಲ್ಲಿ ತತ್ವ ಅಥವಾ ನೀತಿ ಏನಾದರೂ ಇದೆಯೋ ಅಥವಾ ಕೇಳಿದವರಿಗೆ ಕೊಡುತ್ತಾರೋ?

ಶ್ರೀ ಟಿ. ಮರಿಯಪ್ಪನವರು.—ತತ್ವ ಮತ್ತು ನೀತಿ ಇದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಅಮೃತಮಹಲ್ ಕಾವಲಿಗಾಗಿ ಮೀಸಲಾಗಿಟ್ಟಿರುವ ಜಮೀನು ಅದರ ಅವಶ್ಯಕತೆಗಳಿಗಿಂತ ಹೆಚ್ಚು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಅದು ಅಭಿಪ್ರಾಯದ ಮಾತು.

ಶ್ರೀ ಎಚ್. ಸಿದ್ದವೀರಪ್ಪನವರು.—ಈಗಿರುವ ಅಮೃತ ಮಹಲ್ ಕಾವಲುಗಳಲ್ಲಿ ಒಂದು ವರ್ಷವಾದರೂ ದನ ಮೇಯಿಸದೇ ಇರುವುದಕ್ಕೆ ಉದಾಹರಣೆ ಕೊಟ್ಟರೆ ಒಪ್ಪಿಕೊಳ್ಳುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಅಮೃತಮಹಲ್ ಕಾವಲು ಇರುವ ಕೆಲವು ಕಡೆ ಸರ್ಕಾರಿ ದನಗಳು ಇಲ್ಲದೆ, ಕಾವಲಿನ ಹುಲ್ಲು ನಮ್ಮನೆ ವ್ಯರ್ಥವಾಗುತ್ತಿದ್ದರೆ ಅಂತ ಕಡೆ ಬೇರೆ ಜನರ ದನಗಳನ್ನು ಮೇಯಿಸಲು ಅವಕಾಶ ಕೊಡುತ್ತೀರಾ?

Sri T. MARIAPPA.—Sir, it is not a question for eliciting information. It is a request for action.

Sri M. GOVINDA REDDY (Chitaldrug District—General).—Are Government aware that the Amritmahal cattle are a rare species in the world?

Sri T. MARIAPPA.—It is indeed a very good breed that Mysore has in the Amritmahal cattle.

Sri M. GOVINDA REDDY.—Are Government aware that these Amritmahal cattle are indented upon by foreign countries?

Sri T. MARIAPPA.—In fact there is a requisition to send some of these cattle to foreign countries.

Mr. SPEAKER.—Does not the Hon'ble Member think that these supplementary questions are beyond the scope of this question ?

Sri M. GOVINDA REDDY.—Sir, my point is to see that Government gives more encouragement for breeding of Amritmahal cattle. it being an important factor in the national wealth of the country. I am therefore putting these questions.

Are Government not convinced that the amount that they are spending on the breeding of this species of cattle is very little ?

Sri T. MARIAPPA.—No. We are spending adequate sums commensurate with the returns.

Sri M. GOVINDA REDDY.—Are Government not convinced that in the interests of agricultural economy of the State, they should encourage breeding and increase the number of these cattle ?

Sri T. MARIAPPA.—We are trying our best to upgrade and increase the number.

Sri M. GOVINDA REDDY.—Have Government any plans to improve the farms where these cattle are bred and increase their number ?

Sri T. MARIAPPA.—We are prepared to improve by spending more sums. But the spending must be commensurate with the results we get.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸಂಸ್ಥಾನದಲ್ಲಿರುವ ಅಮೃತಮಹಲ್ ದನಗಳ ಸಂಖ್ಯೆ 3,975; ಅದರಲ್ಲಿ 1,824 ಸರ್ಕಾರಿ ಫಾರಂಗಳಲ್ಲಿಯೂ 891 ಸೇರ್ವೆಗಾರರ ಹತ್ತಿರವೂ ಇವೆ ಎಂದು ಉತ್ತರದಲ್ಲಿ ತಿಳಿಸಿದೆ. ಬಾಕಿ ದನಗಳು ಎಲ್ಲಿವೆ ?

ಶ್ರೀ ಟಿ. ಮರಿಯಪ್ಪನವರು—That question has already been answered. ಏಡೆಡ್ ಬ್ರೀಡರ್ಸ್ ಹತ್ತಿರ ಇರುತ್ತವೆಂದು ಹೇಳಿದ್ದೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—44,335 ಎಕರೆ ಜಮೀನು ಸಂಸ್ಥಾನದಲ್ಲಿರುವ ಎಲ್ಲ ಅಮೃತ ಮಹಲ್ ದನಗಳಿಗೆಂತಲೋ ಅಥವಾ ಸರ್ಕಾರಿ ದನಗಳಿಗೆ ಮಾತ್ರ ಎಂತಲೋ ?

Sri T. MARIAPPA.— The question and the answer printed are both clear.

Sri H. M. CHANNABASAPPA.—Am I to understand that the area is exclusively for these cattle.

Mr. SPEAKER.—The question is like that and the answer also is likewise.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—57,118 ರೂಪಾಯಿ ಬರಿಯ ದನಗಳ ಮೇಲಾಗುವ ಖರ್ಚೋ ಅಥವಾ ಅದರಲ್ಲಿ ಓವರ್ ಹೆಡ್ ಖರ್ಚೂ ಸೇರಿದೆಯೊ?

ಶ್ರೀ ಟಿ. ಮರಿಯಪ್ಪನವರು.—Cattle Breeding Station, Economic Farms, ಸೇರ್ವೆಗಾರರಲ್ಲಿರುವುದು—ಇವುಗಳ ಖರ್ಚು ಸೇರಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—Overhead ಖರ್ಚು ಲೆಕ್ಕಾಚಾರ ಹಾಕಿದರೆ ಎಷ್ಟಾಗುತ್ತದೆ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಕೆ. ನುಬ್ಬರಾಯರು (ಬೆಂಗಳೂರು ಜಿಲ್ಲೆ).—ಒಟ್ಟು 3975 ದನಗಳಿವೆಯೆಂದು ತಿಳಿಸಿದೆ, ಅವುಗಳೆಲ್ಲ ಪ್ರಾಯದವೋ ಅಥವಾ ಆ ಸಂಖ್ಯೆಯಲ್ಲಿ ಮುದಿ ದನಗಳೂ ಸೇರಿವೆಯೊ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಅವ್ಯತಮಹಲ್ ದನಗಳಿಂದ ಬರತಕ್ಕ ಉತ್ಪತ್ತಿ 73,775 ರೂಪಾಯಿ ಎಂದು ಉತ್ತರದಲ್ಲಿದೆ, ಇದರಲ್ಲಿ ರಾಸುಗಳನ್ನು ಮಾರಿದ್ದೆಷ್ಟು, ಬೀಜದ ಹೋರಿಗಳನ್ನು ಮಾರಿ ಬಂದದ್ದೆಷ್ಟು ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಕೇಳಿದವರಿಗೆ ಬೀಜದ ಹೋರಿಗಳನ್ನು ಕೊಡುತ್ತಿದ್ದಾರೆಯೆ ?

ಶ್ರೀ ಟಿ. ಮರಿಯಪ್ಪನವರು.—ಕೊಡುತ್ತಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಅನೇಕ ಸಂದರ್ಭಗಳಲ್ಲಿ ಕೇಳಿದರೂ ಕೊಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಮರಿಯಪ್ಪನವರು.—ಇದ್ದರೆ ಕೊಡದೇ ಇರುವುದಿಲ್ಲ. ವರ್ಷವರ್ಷವೂ ಕರುಗಳು ತಯಾರಾದ ಹಾಗೆ ಕೇಳಿದವರಿಗೆ ಕೊಡುತ್ತಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಇದುವರೆಗೆ ಒಟ್ಟು ಎಷ್ಟು ಹೋರಿಗಳಾಗಿವೆ ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಹೋರಿಗಳು ಸಾಕಾದಷ್ಟಿಲ್ಲ. There is acute shortage of bulls.... .....

Sri T. MARIAPPA.—In fact that is the reason why we are augmenting the resources for cattle breeding.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ತಳಿಗಳನ್ನು ಅಭಿವೃದ್ಧಿ ಮಾಡುವುದು ಸಾಕೆಂದು ಸರ್ಕಾರದವರ ಅಭಿಪ್ರಾಯವೆ ?

ಶ್ರೀ ಟಿ. ಮರಿಯಪ್ಪನವರು.—ಇನ್ನೂ ಅಭಿವೃದ್ಧಿ ಮಾಡಿ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಉದ್ದೇಶವಿದೆ.

Working of Dairy Farms in the State.

*Q.—20. **Sri B. N. BORANNA GOWDA** (Hassan District—General).—Will the Government be pleased to state:—

(a) the number of dairy farms in the State that get aid from the Government (districtwar details to be furnished) ;

(b) the quantity of milk that is made available to the public every day from these dairies ;